**ಸಿವಿಲ್ ಜಡ್ಜ್ ಹಾಗೂ ಹೆ. ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ.**

**ಸಿ.ಸಿ .ಸಂಖ್ಯೆ ::2270/2022**

**DW-1**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಶಿವರಾಜ್ |
| **ತಂದೆಯ ಹೆಸರು** | : | ಎ ವಿ ಚಿನ್ನಪ್ಪ |
| **ವಯಸ್ಸು** | : | 62 ವರ್ಷ |
| **ಉದ್ಯೋಗ** | : | Retd. Assistant Manager |
| **ವಾಸಸ್ಥಳ** | : | ಭದ್ರಾವತಿ |

**ದಿನಾಂಕಃ25-06-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಆರೋಪಿ ಪರ ಶ್ರೀ. SR ವಕೀಲರಿಂದ ::**

ನಾನು 2012 ರಿಂದ 2014 ನೇ ಸಾಲುಗಳಲ್ಲಿ ನಾನು ಕೆಲಸ ಮಾಡುತ್ತಿದ್ದ ವಿಜಯ ಬ್ಯಾಂಕ್ ನಿಂದ 9 ಲಕ್ಷ ಸಾಲವನ್ನು ಪಡೆದು ಭದ್ರಾವತಿ ಸಂತೇಮೈದಾನದ ಬಳಿ ನನ್ನ ಒಂದು ನಿವೇಶನದಲ್ಲಿ 2 ಅಂತಸ್ತಿನ ಮನೆಯನ್ನು ನಿರ್ಮಾಣ ಮಾಡಿರುತ್ತೇನೆ. ಸದರಿ ಸಮಯದಲ್ಲಿ ಪಿರ್ಯಾದುದಾರರಿಂದ ಹಂತ ಹಂತವಾಗಿ 5 ಲಕ್ಷ ರೂಪಾಯಿ ಹಣವನ್ನು ಸಾಲವಾಗಿ ಪಡೆದಿರುತ್ತೇನೆ. ಸದರಿ ಸಾಲಕ್ಕೆ ಸಂಬಂಧಪಟ್ಟಂತೆ  ನನ್ನ ಬ್ಯಾಂಕ್ ಖಾತೆಗೆ ಸಂಬಂಧಪಟ್ಟ 10 ಸಹಿ ಮಾಡಿದ ಖಾಲಿ ಚೆಕ್ ಗಳನ್ನು ಭದ್ರತೆಗಾಗಿ ಪಿರ್ಯಾದುದಾರರಿಗೆ ನೀಡಿರುತ್ತೇನೆ. ಸದರಿ ಚೆಕ್ ಗಳಲ್ಲಿ 2 ಚೆಕ್ ಗಳನ್ನು ಪಿರ್ಯಾದುದಾರರು ದುರುಪಯೋಗಪಡಿಸಿಕೊಂಡು ನನ್ನ ವಿರುದ್ದ ಸುಳ್ಳು ಪ್ರಕರಣಗಳನ್ನು ದಾಖಲು ಮಾಡಿರುತ್ತಾರೆ. ಅದನ್ನು ಹೊರತುಪಡಿಸಿ ಅವರ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಮಂಜಯ್ಯ ಮತ್ತು ಸೋಮಶೇಖರಪ್ಪ ಎನ್ನುವವರ ಮುಖಾಂತರ ಇನ್ನೆರಡು ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಇನ್ನೆರಡು ಸುಳ್ಳು ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಅದನ್ನು ಹೊರತುಪಡಿಸಿ ಪಿರ್ಯಾದುದಾರರ ಅಕ್ಕನ ಮಗ ಮಹೇಶ್ ರವರ ಮುಖಾಂತರ ಸಹ ಇನ್ನೆರಡು ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಮತ್ತೊಂದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ. ಅದನ್ನು ಹೊರತುಪಡಿಸಿ ಪಿರ್ಯಾದುದಾರರ ಮತ್ತೊಂದು ಅಕ್ಕನ ಮಗ ಪ್ರವೀಣ್ ರವರ ಮುಖಾಂತರ ಸಹ 3 ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಮತ್ತೊಂದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ. ಪಿರ್ಯಾದುದಾರರಿಂದ ಸಾಲವಾಗಿ ಪಡೆದ 5 ಲಕ್ಷ ರುಪಾಯಿ ಹಣವನ್ನು ನಾನು ದಿನಾಂಕ 20.07.2019 ರಂದು ಅವರ ಬ್ಯಾಂಕ್ ಖಾತೆಗೆ ನೇರವಾಗಿ ಹಣವನ್ನು ಹಾಕಿ ಸದರಿ ಸಾಲವನ್ನು ತೀರಿಸಿರುತ್ತೇನೆ.

ನಾನು ಫಿರ್ಯಾದುದಾರರಿಂದ ಯಾವತ್ತು ಸಹ 25 ಲಕ್ಷ ಹಣವನ್ನು ಸಾಲವಾಗಿ ಪಡೆದಿರುವುದಿಲ್ಲ. ಆದ್ದರಿಂದ ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

(ಮುಂದುವರೆದ ಮುಖ್ಯ ವಿಚಾರಣೆಗೆ ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-
ಸಿ.ಜೆ. ಮತ್ತು ಹೆ. ಜೆ.ಎಮ್.ಎಫ್.ಸಿ.,
ತರೀಕೆರೆ.

ಸಾಕ್ಷಿಯ ಸಹಿ::